# ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

## ಸತ್ರ ಪ್ರಕರಣ ಸಂಖ್ಯೆಃ 5058/2025

ಪ್ರಾ ಸಾ 3 ಚಾ ಸಾ 3

ಹೆಸರುಃ ಗಿರೀಶ

ತಂದೆಯ ಹೆಸರುಃ ಬಸವೇಗೌಡ

ವಯಸ್ಸುಃ 43 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಅಮೃತಿ ಹಳ್ಳಿ .

**ದಿಃ 04.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನನಗೆ ಚಾಸ 1 ಗೊತ್ತಿಲ್ಲ. ಈಗ 3 ಫೋಟೋಗಳಲ್ಲಿ ತೋರಿಸಿದ ಆಟೋವನ್ನು ನಾನು ಈ ಹಿಂದೆ ಎಲ್ಲೂ ನೋಡಿಲ್ಲ.

2. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು

ನೋಡಿಲ್ಲ. ಆತನ ಹೆಸರು ವಿಳಾಸ ನನಗೆ ಗೊತ್ತಿಲ್ಲ.

3. ಈಗ ತೋರಿಸಿದ ಎರಡು ಪ್ಲಾಸ್ಟಿಕ್ ಹಗ್ಗದ ತುಂಡುಗಳನ್ನು ಈ ಹಿಂದೆ ಎಲ್ಲೂ ನೋಡಿರುವುದಿಲ್ಲ.

4. ಶಿವಕುಮಾರವರ ಮಗ ಚಂದ್ರಶೇಖರ -ಚಾಸಾ2 ಗೊತ್ತು. ಆತ ವ್ಯವಸಾಯ ಮಾಡುತ್ತಾನೆ . ಮೆನಾಗರ ಪಂಚಾಯತಿ ಮೆಂಬರ್ ಆದ ಚಾಸಾ4 ನನಗೆ ಗೊತ್ತಿಲ್ಲ.

5. ಈ ಪ್ರಕರಣದ ಆರೊಪಿತರ ವಿರುದ್ಧ ಯಾರು ದೂರು ನೀಡಿ ಪ್ರಕರಣ ದಾಖಲಾಗಿದೆ ಎಂದು ಗೊತ್ತಿಲ್ಲ. ಆರೋಪಿತನ ವಿರುದ್ದದ ಈ ಪ್ರಕರಣದಲ್ಲಿ ಪೊಲೀಸರು ನನ್ನನ್ನು ವಿಚರಣೆ ಮಾಡಿ ಹೇಳಿಕೆ ಪಡೆದಿಲ್ಲ.

6. ಇತ್ತೀಚಿನ ದಿನಗಳಲ್ಲಿ ನಾನು ಯಾವುದೇ ಕಾರಣ ಮೇಲುಕೋಟೆ ಪೊ.ಠಾಣೆಗೆ ಹೋಗಿರಲಿಲ್ಲ.

(ಈ ಸಾಕ್ಷಿಯು ತನ್ನ ಹೇಳಿಕೆಗೆ ವಿರುದ್ಧವಾದ ಸಾಕ್ಷ್ಯವನ್ನು ನುಡಿದಿರುವುದರಿಂದ ಅಭಿಯೋಜಕರ ಕೋರಿಕೆಯಂತೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ.)

ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ

7. 2025 ನೇ ಇಸವಿಯಲ್ಲಿ ಒಂದು ದಿನ ನಾನು ಮತ್ತು ಚಾಸಾ2 ರವರು ಬೋರಾಪುರಕ್ಕೆ ಹೋಗುವ ರಸತೆಯಲ್ಲಿ ಹೋಗುತ್ತಿದ್ದಾಗ ಅದೇ ರಸ್ತೆಯಲ್ಲಿ ಹೊಂದಿಕೊಂಡಂತೆ ಇರುವ ಹೇಮಾವತಿ ಉಪಕಾಲುವೆಯ ಮೇಲೆ ಒಬ್ಬ ವ್ಯಕ್ತಿಯು ಮಹಿಳೆಯೊಬ್ಬಳಿಗೆ ಹೊಡೆಯುತಿರುವುದು ಕಂಡುಬಂದು ನಾವು ಹತ್ತಿರ ಹೋದಾಗ ಸದರಿ ವ್ಯಕ್ತಿಯು ಈಗ ಪೊಟೋದಲ್ಲಿ ಕಾಣಿಸಿದ ಆಟೋವನ್ನು ಸ್ಟಾರ್ಟ್ ಮಾಡಿಕೊಂಡು ಹೊರಟು ಹೋದರೆಂದರೆ ಸರಿಯಲ್ಲ.

8. ನಾನು ಮತ್ತು ಚಾಸಾ2 ರವರು ಅಲ್ಲೇ ಇದ್ದ ಮಹಿಳೆಯನ್ನು ವಿಚಾರಿಸಿದಾಗ ಅವಳು ಈ ಪ್ರಕರಣದ ದೂರುದಾರಳಾದ ಲತಾ ಆಗಿದ್ದು ಅವರು ಲಕ್ಷ್ಮಿಸಾಗರದ ಗ್ರಾಮದವರಾಗಿದ್ದು ಆರೋಪಿ ಗೆ ಆ ಹಿಂದೆ 2 ಲಕ್ಷ 50 ಸಾವಿರ ರೂ.ಗಳನ್ನು ಸಾಲವಾಗಿ ನೀಡಿದ್ದು ಅದನ್ನು ಹಿಂದಿರುಗಿಸುವಂತೆ ಕೇಳಿಕೊಂಡಾಗ ಆರೋಪಿಯು ಹಣ ಕೊಡುತ್ತೇನೆ ಎಂದು ಹೇಳಿ ಜಕ್ಕನಹಳ್ಳಿ ಹೋಗಲೆಂದು

ನರಹಳ್ಳಿ ಬಸ್ ನಿಲ್ದಾಣದ ಬಳಿ ಇದ್ದಅವರನ್ನು ಆಟೋದಲ್ಲಿ ಕೂರಿಸಿಕೊಂಡು ಈ ಸ್ಥಳದಲ್ಲಿ ಕರೆದುಕೊಂಡು ಬಂದು ಅಲ್ಲಿ ನಿರ್ಜನ ಪ್ರದೇಶವಾದ್ದರಿಂದ ಆಟೋದಿಂದ ಕೆಳಕ್ಕೆ ಕರೆದು ಕಾಲಿನಿಂದ ತುಳಿದು , ಕಬ್ಬಿಣದ ರಾಡಿನಿಂದ ತಲೆಗೆ ಹೊಡೆದು ಕುತ್ತಿಗೆ ಹಿಸುಕಿ ಕೊಲೆ ಮಾಡಲು ಪ್ರಯತ್ನಿಸುತ್ತಿದ್ದ ಮುಂದುವರೆದು ಕಾಲುಗಳನ್ನು ಹಗ್ಗದಿಂದ ಕಟ್ಟುತ್ತಿರುವಾಗ ನೀವು ಸ್ಥಳಕ್ಕೆ ಬಂದಿರುತ್ತೀರಿ ಎಂದು ತಿಳಿಸಿದ್ದಳು ಎಂದರೆ ಸರಿಯಲ್ಲ.

9. ನಂತರದಲ್ಲಿ ಅವಳು ಮೇನಾಗ ಗ್ರಾಮದ ಪಂಚಾಯತಿ ಮೆಂಬರ್ ಗಳ ದೂರವಾಣಿ ಸಂಖ್ಯೆಗಳನ್ನು ನೀಡಲಾದ ಚಾಸಾ2 ರವರು ಸದರಿ ಯವರಿಗೆ ಫೋನ್ ಮಾಡಿದ್ದು ಅವರು ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಅಷ್ಟು ಹೊತ್ತಿಗಾಗಲೇ ಸ್ಥಳಕ್ಕೆ ಅಂಬುಲೆನ್ಸ್ ಬಂದಿದ್ದು ಚಾಸಾ5 ರವರು ಆಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗಿದ್ದರೆಂದರೆ ಸರಿಯಲ್ಲ.

10. ದಿಃ 9.6.2025 ರಂದು ಪೊಲೀಸರು ಘಟನ ಸಂಬಂದ

ಠಾಣೆಗೆ ಕರೆಸಿ ವಿಚಾರ ಮಾಡಿದಾಗ ನಾನು ಮೇಲೆ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ 7 ಎಂದು ಗುರುತಿಸಲಾಯಿತು.

11.ನಿಪಿ 7 ರಲ್ಲಿ ತಿಳಿಸಲಾದಂತೆ ಘಟನೆ ನಡೆದಿರುವ ಬಗ್ಗೆ ಗೊತ್ತಿದ್ದರೂ ಆರೋಪಿಯ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ</u>
<u>ಶ್ರೀ ಸಿ ಎಂ ಎಸ್ ವಕೀಲರಿಂದಃ</u>

ಇರುವುದಿಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)